ದಿಃ07.03.2022 OS.No.8/2015 PW-1

ದಿಃ07.03.2022 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎ ಬಿ ಕೆ ವಕೀಲರಿಂದಃ

ಸುಮಾರು 25 ವರ್ಷಗಳಿಂದಲೂ ನಾನು ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೇನೆ ಎಂದರೆ ಸರಿ. 1998 ರಲ್ಲಿ ಮೊದಲನೇ ಪ್ರತಿವಾದಿಯ ಗಂಡನ ಮತ್ತು ಎರಡರಿಂದ ಐದನೇ ಪ್ರತಿವಾದಿಗಳ ತಂದೆ ಅವರ ವಿರುದ್ದ ದಾವೆ ಹೂಡಿದ್ದೆ ಎಂದರೆ ಸರಿ. ಅದು ಅಸಲು ದಾವಾ ಸಂಖ್ಯೆ 162/1998 ಎಂದರೆ ಸರಿ. ಸದರಿ ದಾವೆಯನ್ನು ಹಾಕಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರಸ್ತುತ ದಾವೆ ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅಸಲು ದಾವಾ ಸಂಖ್ಯೆ 162/1998 ವಜಾ ಆಗಿದೆ ಎಂದರೆ ಸರಿ. ಗೂಳೀಗೌಡರ ಮನೆಯ ಪಶ್ಚಿಮ ದಿಕ್ಕಿಗೆ ಪ್ಯಾಸೇಜ್ ಇದೆ ಎಂದರೆ ಸರಿ. ಗೂಳೀಗೌಡರ ಮನೆಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಯ ವಾಸದ ಮನೆ ಇದೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯ ಮೂಲಕವೇ ಪ್ರತಿವಾದಿ ಮತ್ತು ಗೂಳೀಗೌಡರು ತಿರುಗಾಡಬೇಕು ಎಂದರೆ ಸರಿ. ಸಾಕ್ಷಿಗೆ ಪೋಟೋ ತೋರಿಸಲಾಗಿ ಅದರಲ್ಲಿ ಕಾಣುವ ಮಂಗಳೂರು ಹಂಚಿನ ಮನೆ ವಾದಿಯದು ಮತ್ತು ಅದರಲ್ಲಿ ಕಾಣುವ ಪ್ಯಾಸೇಜ್ ಮೂಖಾಂತರವೇ ಗೂಳೀಗೌಡರು ಮತ್ತು ಪ್ರತಿವಾದಿಗಳು ಓಡಾಡಬೇಕು ಎಂದರೆ ಸರಿ. ಪೋಟೋ ವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಪೋಟೋ ತೋರಿಸಲಾಗಿ ಅದರಲ್ಲಿ ಕಾಣುವ ಮಂಗಳೂರು ಹಂಚಿನ ಮನೆ ವಾದಿಯದು ಎದುರುಗಡೆ ಕಾಣುವ ಮನೆ ಪ್ರತಿವಾದಿಯದು ಮತ್ತು ಗೂಳೀಗೌಡರ ಮನೆ ಎದುರು ಪ್ಯಾಸೇಜ್ ಇದೆ ಎಂದರೆ ಸರಿ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ಉತ್ತರ ದಕ್ಕು ಹಾಗೂ ನಿಡಿ-2 ರ ಪೂರ್ವ ದಿಕ್ಕಿ ನಲ್ಲಿ ಪ್ರತಿವಾದಿ ತಿರುಗಾಡಬೇಕು ಎಂದರೆ ಸರಿ. ಪ್ರತಿವಾದಿ

ನನ್ನ ಸಂಬಂಧಿಕ ಎಂದರೆ ಸರಿ. ಪ್ರತಿವಾದಿ ಮಾರಾಟ ಮಾಡುವುದಕ್ಕೂ ಮೊದಲು ದಾವಾ ಸ್ವತ್ತಿನ ಮನೆಯ ಪಶ್ಚಿಮ ದಿಕ್ಕಿನ ರಸ್ತೆ ಯಿಂದ ದಾವಾ ಅಸ್ತಿಯಲ್ಲಿಯೇ ಪ್ರತಿವಾದಿ ಓಡಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸಹ ಓಡಾಡುತ್ತಿದ್ದೆವು ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಮನೆಯ ಪಶ್ಚಿಮ ದಿಕ್ಕಿನ ದಕ್ಷಿಣಕ್ಕಿರುವ ಖಾಲಿ ಜಾಗ ನನ್ನದು ಎಂದರೆ ಸಾಕ್ಷಿ (ಈ ಪ್ರಶ್ನೆಗೆ ಅಸಂಬಂಧವಾದ ಉತ್ತರವನ್ನು ನೀಡಿದರು).

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.